


“ಇಲ್ಲಿ 10x8 ಕೋಣೆಬರಲಿ” ಹಾಗಂತ ಮಿಸೆಸ್ ಮಲೀಕ್ ತನ್ನ ಮುಂದಿರುವ ಟೇಬಲ್ ಮೇಲೆ ಈಗಾಗಲೇ ಮನೆ ಕಟ್ಟಿಸಲು ತಯಾರಿಸಿದ ನಕಾಸೆಯಲ್ಲಿನ ಚೌಕವೊಂದನ್ನು ತೋರಿಸುತ್ತಾ ಹೇಳಿದಳು. ಆಕೆ ಈ ಸಲಹೆಯನ್ನು ಕೊಟ್ಟಿದ್ದು ಮೂರನೇ ಬಾರಿಯಾಗಿತ್ತೇನೋ! ಆದರೆ ಆಕೆಯ ಮಾತನ್ನು ಅವಳ ಗಂಡನಾಗಲಿ, ವಾಸ್ತುಶಿಲ್ಪಿಯಾಗಲಿ ತಮ್ಮ ಕಿವಿಯ ಮೇಲೆ ಹಾಕಿಕೊಂಡಂತೆ ಕಾಣಲಿಲ್ಲ.

ಈ ಹಿಂದೆ ಮಲೀಕ್‌ರು ದೆಹಲಿಯ ಅತ್ಯಾಕರ್ಷಕ ಬಡಾವಣೆಯೊಂದರಲ್ಲಿ ನಿವೇಶನ ಒಂದನ್ನು ಕೊಂಡುಕೊಂಡಿದ್ದರು. ಆದರೆ ಅವರಿಗೆ ಮೇಲಿಂದ ಮೇಲೆ ಒಂದು ಊರಿನಿಂದ ಇನ್ನೊಂದು ಊರಿಗೆ ವರ್ಗವಾಗುತ್ತಿದ್ದರಿಂದ ಅಲ್ಲಿ ಮನೆ ಕಟ್ಟಿಸಲು ಸಾಧ್ಯವಾಗಿರಲಿಲ್ಲ. ಆದರೆ ಇದೀಗ ಮತ್ತೆ ಅದೇ ಊರಿಗೆ ವರ್ಗವಾಗಿ ಬಂದಿದ್ದರಿಂದ ಅಲ್ಲಿ ತಮ್ಮದೇ ಆದ ಒಂದು ಸ್ವಂತ ಮನೆಯನ್ನು ಕಟ್ಟಿಸಲು ಮುಂದಾಗಿದ್ದರು.

ಒಂದು ಸಾರಿ ಮನೆ ಕಟ್ಟಿಯಾದ ಮೇಲೆ ತನ್ನ ಗಂಡನಿಗೆ ದೆಹಲಿಯಿಂದ ಬೇರೆ ಕಡೆ ವರ್ಗವಾದರೂ ಸರಿ ತಾನು ಮಾತ್ರ ಅದೇ ಊರಿನಲ್ಲಿದ್ದುಕೊಂಡು ಹೊಸಮನೆಯಲ್ಲೇ ವಾಸಿಸಬೇಕೆಂದು ಅದಾಗಲೇ